ದಿನಾಂಕ 02.09.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು</u> : ವಾದಿ ಪರಃ ಶ್ರೀ ಐ ಆರ್ ಬಿ ವಕೀಲರಿಂದಃ

ನನಗೆ 38 ವರ್ಷಗಳಿಂದ ವಾದಿಯ ಪರಿಚಯ ಇರುತ್ತದೆ. ಯಾವ ಜಾಗದ ಬಗ್ಗೆ ದಾವೆಯನ್ನು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನಾನು ಹೋಗುವ ದಾರಿ ಬಗ್ಗೆ ದಾವೆ ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ನನಗೆ ಸಂಬಂಧಪಟ್ಟ ಆಸ್ತಿಯ ಸರ್ವೆ ನಂಬರ್ 109 ಎಂದು ಗೊತ್ತಿದೆ ಆದರೆ ಅದರಲ್ಲಿ ಯಾವ ಹಿಸ್ಸೆ ಎಂದು ಗೊತ್ತಿಲ್ಲ. ನನಗೆ ಸದ್ರಿ ಆಸ್ತಿಯು ಹೇಗೆ ಬಂತು ಎಂದು ನನ್ನ ಬಳಿ ದಾಖಲೆ ಇದೆ. ಸಾಕ್ಷಿ ಮುಂದುವರಿದು ಸದ್ರಿ ಜಾಗವು ನನ್ನ ಅಜ್ಜಿ ಕಿಟ್ಟಿ ಶೆಡ್ತಿಯ ಹೆಸರಿನಲ್ಲಿ ಇದೆ. ಕಿಟ್ಟಿ ಶೆಡ್ತಿಯವರ ಹೆಸರಿನಲ್ಲಿ ಜಾಗಗಳು ಇದೆ ಎಂಬ ಬಗ್ಗೆ ದಾಖಲೆಗಳು ಇವೆ. ಸದ್ರಿ ಜಾಗಗಳ ಬಗ್ಗೆ ನಕ್ಷೆ ಇದೆ. ಸದ್ರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಕಿಟ್ಟಿ ಶೆಡ್ತಿಯವರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜುರಾದ ಆಸ್ತಿ. ಸದ್ರಿ ಆದೇಶವನ್ನು ನೋಡಿದರೆ ಕಿಟ್ಟಿ ಶೆಡ್ತಿಯವರಿಗೆ ಮಂಜೂರಾದ ಆಸ್ತಿಗಳ ಬಗ್ಗೆ ಗೊತ್ತಾಗುತ್ತದೆ. ಸದ್ರಿ ದಾಖಲೆಯಲ್ಲಿ ದಾರಿಯ ಬಗ್ಗೆ ಬರೆದಿರುವುದಿಲ್ಲ. ಸಾಕ್ಷಿ ಮುಂದುವರಿದು ಮೊದಲಿನಿಂದಲೂ ದಾರಿ ಇತ್ತು ಎಂದು ನುಡಿಯುತ್ತಾರೆ.

ಈ ದಾವೆಯ ದಾವಾ ಆಸ್ತಿ 4.79 ಎಕ್ರೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿಗಳನ್ನು ಈವರೆಗೂ ಅಳತೆ ಮಾಡಿಸಿರುವುದಿಲ್ಲ, ಏಕೆಂದರೆ ವಾದಿಯವರು ಅಳತೆ ಮಾಡಲು

ಬಿಟ್ಟಿರುವುದಿಲ್ಲ. ಕಿಟ್ಟ ಶೆಡ್ತಿಯವರು ಮೊದಲು ಮಾಡಿಸಿರಬಹುದು, ಆದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕಿಟ್ಟಿ ಶೆಡ್ತಿಯವರು ಈಗ ಮರಣಹೊಂದಿರುತ್ತಾರೆ. ಅಳತೆ ಮಾಡಲು ವಾದಿಯವರು ಬಿಡುವುದಿಲ್ಲ ಎಂದು ಪೊಲೀಸರಿಗಾಗಲಿ, ಕಂದಾಯ ಇಲಾಖೆಯ ಅಧಿಕಾರಿಗಳಿಗಾಗಲಿ ದೂರನ್ನು ನೀಡಿರುವುದಿಲ್ಲ. ದಾವೆಯ ಅನುಭವವನ್ನು ವಕೀಲರಿಗೆ ನೀಡುವಾಗ ವಾದಿಯವರು ನಮ್ಮ ಜಾಗವನ್ನು ಅಳತೆ ಮಾಡಲು ಬಿಡುತ್ತಿಲ್ಲ ಎಂದು ತಿಳಿಸಿರುತ್ತೇನೆ. ಭೂ ನ್ಯಾಯ ಮಂಡಳಿಯ ದಾಖಲೆಯನ್ನು ನೋಡಿದರೆ ನನಗೆ ತಿಳಿಯುವುದಿಲ್ಲ ಹಾಗೂ ಜಾಗವನ್ನು ಅಳತೆ ಮಾಡದೆ ಇದ್ದುದರಿಂದ ನನ್ನ ಜಾಗವು ಎಲ್ಲಿ ಬರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ಜಾಗವು ಸರ್ವೆ ನಂಬರ್ 109 ರಲ್ಲಿ ಬರುತ್ತದೆ. ನನ್ನ ಜಾಗವು ಸರ್ವೆ ನಂಬರ್ 109 ರಲ್ಲಿ ಬರುತ್ತದೆ ಎಂದು ತೋರಿಸಲು ನನ್ನ ಬಳಿ ನಕ್ಷೆ ಹಾಗೂ ಪಹಣಿಪತ್ರಿಕೆ ಇದೆ. ಸದ್ರಿ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ದಾವಾ ಆಸ್ತಿಯು ಯಾವ ರೀತಿಯ ಜಾಗ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಅಸ್ತಿಯು ವಾದಿ ಮತ್ತು ಅವರ ಕುಟುಂಬಸ್ಥರಿಗೆ ನ್ಯಾಯಾಲಯದ ಆದೇಶದ ಪ್ರಕಾರ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯಲ್ಲಿ ಯಾವೆಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿಯ ತಾಯಿಯನ್ನು ನಾನು ಚಿಕ್ಕವನಿದ್ದಾಗ ನೋಡಿರುತ್ತೇನೆ. ದಾವಾ ಆಸ್ತಿಯ ಪಹಣಿ ಪತ್ರವು ವಾದಿ ಹಾಗೂ ಅವರ ಕುಟುಂಬಸ್ಥರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ದಾವಾ ಆಸ್ತಿ ಸರ್ವೆ ನಂಬರ್ 109 ರಲ್ಲಿ ಇದೆ ಎಂದು ತಿಳಿದುಕೊಂಡಿರುತ್ತೇನೆ. ವಾದಿಯವರು ಎಷ್ಟು ವಿಸ್ತೀರ್ಣದ ಸ್ಥಳಕ್ಕೆ ದಾವೆಯನ್ನು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

ವಾದಿಯು ನನ್ನ ವಿರುದ್ಧ ದಿಃ12.06.2019 ರಂದು ನಾನು ಜೆಸಿಬಿ ಮೂಲಕ ಕೆಲಸ ಮಾಡಿಸಿರುತ್ತೇನೆ ಎಂದು ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಂತೆ ಪೊಲೀಸರು ನನ್ನಲ್ಲಿ ಮುಚ್ಚಳಿಕೆ ಬರೆಸಿಕೊಂಡಿರುತ್ತಾರೆ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ-6 ರಂತೆ ಕಾರ್ಕಳ ತಹಸಿಲ್ದಾರ್ ಸಹ ಅಜೆಕಾರು ಪೊಲೀಸ್ ಉಪನೀರಿಕ್ಷಕರಿಗೆ ಸೂಚನೆ ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಗೆ ನಾವು ರಸ್ತೆ ಬೇಕು ಎಂದು ಯಾವುದೇ ಅರ್ಜಿ ನೀಡಿರುವುದಿಲ್ಲ. ಸಾಕ್ಷಿ ಮುಂದುವರಿದು ಹಿಂದಿನಿಂದಲೂ ರಸ್ತೆ ಇದ್ದರಿಂದ ಅರ್ಜಿಯನ್ನು ನೀಡಿರುವುದಿಲ್ಲ. ರಸ್ತೆ ಇದ್ದ ಬಗ್ಗೆ ಯಾವುದೆ ದಾಖಲೆಗಳು ಇಲ್ಲ. ಸಾಕ್ಷಿ ಮುಂದುವರಿದು ನಮ್ಮ ಅಜ್ಜ ಅಜ್ಜಿ ಕಾಲದಿಂದಲೂ ಅದೇ ರಸ್ತೆಯನ್ನು ಉಪಯೋಗಿಸುತ್ತಿದ್ದೇವೆ. 7-8 ಮನೆಯವರು ಅದೇ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ.

ವಾದಿಯ ಅಣ್ಣತಮ್ಮಂದಿರ ಪರಿಚಯ ಇದೆಯಾ ಎಂದರೆ ಸಾಕ್ಷಿಯು 3 ಜನರ ಪರಿಚಯ ಇದೆ, ಉಳಿದವರ ಪರಿಚಯ ಇರುವುದಿಲ್ಲ. ಅವರು ಪರಸ್ಪರ ಅನ್ಯೋನ್ಯವಾಗಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರೊಳಗೆ ಜಗಳಗಳು ಆಗಿದೆಯೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಸದ್ರಿ ಆಸ್ತಿಯು ವಾದಿಯ ಕುಟುಂಬದ ಆಸ್ತಿ ಎಂದರೆ ಸಾಕ್ಷಿಯು ಕುಟುಂಬದ ಆಸ್ತಿ ಹೌದು, ಆದರೆ ನನಗೂ ಅದರಲ್ಲಿ ಹಕ್ಕು ಇದೆ. ನಿಡಿ-1 ರಲ್ಲಿ ಸರ್ವೆ ನಂಬರ್ ನ ಬಗ್ಗೆ ವಿಚಾರ ಇದೆಯೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನಿಡಿ-2 ರಲ್ಲಿ ಕಾಣಿಸಿದ ವಾದಿಯರು ಯಾರ ವಾರಿಸುದಾರರು ಎಂದು ಗೊತ್ತಿಲ್ಲ. ನಿಡಿ-2 ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಡಿ- 5 ರಲ್ಲಿ ಇರುವ ದಾರಿ ವಾದಿಯ ಮನೆಗೆ ಹೋಗುವ ದಾರಿ ಎಂದು ನನಗೆ ಗೊತ್ತಾಗುವುದಿಲ್ಲ. ಅದೇ ರೀತಿ ನಿಡಿ-3 ರಿಂದ 11 ರ ಭಾವಚಿತ್ರದಲ್ಲಿ ಕಾಣುವ ರಸ್ತೆಯು ಯಾರ ಮನೆಗೆ ಹೋಗುವ ದಾರಿ ಎಂದು ನನಗೆ ಗೊತ್ತಾಗುವುದಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸಾವಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ